ದಿನಾಂಕಃ 3.2.2026 ಎಂ.ವಿ.ಸಿ. ನಂಃ 483/2025 ಪಿಡಬ್ಲೂ ಃ1

ಸಾಕ್ಷಿಯನ್ನು ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು 3 ನೇ ಎದುರದಾರರ ಪರವಾಗಿ ಶ್ರೀ ಎ ಎಂ ಜಿ ವಕೀಲರಿಂದ

ಮೃತ ಆರ್ಶಿಯಾ ಆಜ್ರೂ ನನ್ನ ಮಗಳಾಗಬೇಕು. ಅವಳಿಗೆ 8 ವರ್ಷ ಆಗಿತ್ತು. ನನ್ನ ಮಗಳ ಆಧಾರ್ ಕಾರ್ಡ್ ಮತ್ತು ಜನನ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ. ನನಗೆ ಮೂರು ಜನ ಮಕ್ಕಳು. ಅರ್ಜಿದಾರ 3 ಮತ್ತು 4 ನನ್ನ ಇನ್ನಿಬ್ಬರು ಮಕ್ಕಳು. ಆರ್ಶಿಯಾ ಆಜ್ರೂ 2 ನೇ ತರಗತಿಯನ್ನು ರಾಂಪುರ ಉರ್ದು ಶಾಲೆಯಲ್ಲಿಓದುತ್ತಿದ್ದಳು. ನನ್ನ ಸ್ವಂತ ಊರು ರಾಂಪುರ. ಅಪಘಾತವು ಜೆ ಬಿ ಹಳ್ಳಿ ಸ್ತೆ ರಾಂಪುರ ದಲ್ಲಿ ಆಗಿತ್ತು. ನನ್ನ ಮಗಳು ರಸ್ತೆಯಲ್ಲಿ ಹೋಗುವಾಗ ಹಿಂದಿನಿಂದ ಒಂದು ದ್ವಿಚಕ್ರ ವಾಹನ ಬಂದು ಢಿಕ್ಕಿ ಹೊಡೆದಿದ್ದರಿಂದ ಅಪಘಾತ ಆಗಿತ್ತು. ಸದರಿ ದ್ವಿ ಚಕ್ರ ವಾಹನ ರಾಂಪುರ ದವರದ್ದು ಆಗಿತ್ತು. ಅದನ್ನು 1 ನೇ ಎದುರುದಾರರು ನಡೆಸುತ್ತಿದ್ದರು. ಅದರ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ. ನನ್ನ ಮಗಳ ಜೊತೆ ನಾನು ಅಪಘಾತದ ಸಮಯದಲ್ಲಿ ಇದ್ದೆ. ಅಪಘಾತವು ನನ್ನ ಮಗಳ ತಪ್ಪಿನಿಂದ ಆಗಿತ್ತು ಎಂದರೆ ಸರಿಯಲ್ಲ.

ಅಪಘಾತ ಆದ ನಂತರ ನನ್ನ ಅಣ್ಣನ ಮಗ ನನ್ನ ಮಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದ. ನನ್ನ ಮಗಳು ಆಸ್ಪತ್ರೆಯಲ್ಲಿ 13 ದಿವಸ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದಳು. ನಂತರ ಮೃತಳಾಗಿದ್ದಳು. ನಾನು ಅಪಘಾತದ ಬಗ್ಗೆ ಪೋಲೀಸರಿಗೆ ದೂರನ್ನು ಕೊಟ್ಟಿದ್ದೆ. ಅಪಘಾತ ಆಗಿ 3 ದಿವಸಗಳ ನಂತರ ದೂರು ಕೊಟ್ಟಿದ್ದೆ. ಪೋಲೀಸರು ಚಂದು ಮತ್ತು ಈಶ್ವರ್ ರವರ ವಿರುದ್ದ ಪ್ರಕರಣ ದಾಖಲಿಸಿಕೊಂಡಿದ್ದರು. ಚಾಲಕನಿಗೆ ಡಿ ಎಲ್ ಇಲ್ಲದೇ ಇದ್ದ ಕಾರಣ ವಾಹನದ ಮಾಲೀಕರ ವಿರುದ್ದ ಸಹ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು ಎಂದರೆ ಸರಿಯಲ್ಲ. ಚಂದುಗೆ ಡಿ ಎಲ್ ಇರಲಿಲ್ಲ ಎಂದರೆ ಗೊತ್ತಿಲ್ಲ. ನಾನು ಈ ಪ್ರಕರಣದಲ್ಲಿ ಮಾಹಿತಿಯನ್ನು ಪೋಲೀಸರಿಗೆ ಕೊಟ್ಟಿದ್ದೇನೆ. ನನ್ನ ಮಗಳು ಶಾಲೆಗೆ ಹೋಗುತ್ತಿದ್ದಳು ಎಂದು ತೋರಿಸಲು ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ವಾಹನದ ಚಾಲಕನಿಗೆ ಡಿ ಎಲ್ ಇಲ್ಲದೇ ಇದ್ದ ಕಾರಣ ವಿಮಾ ಕಂಪನಿಯವರು ಪರಿಹಾರದ ಹಣವನ್ನು ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ವಿಶೇಷ ನ್ಯಾಯಾಲಯ, ಬಳ್ಳಾರಿ.